ಪೊಲೀಸ್ ಇಲಾಖಾ.

ನೋಟಿಸ್.

ತಾರೀಖು 11ನೆ ಏಪ್ರಿಲ್ 1907.

ತಾರೀಖು 11—4—1907ರಲ್ಲಿ ಬಂದು ನೂರು ರೂಪಾಯಿನ ಮುತ್ತು T. A 00967 (ಮುದ್ರಾಸ್ ಸರ್ಕಲ್) ನಂಬರಿನ ನೋಟು ಬಂದನ್ನು ಚನ್ನಪಟ್ಟಣ ತಾಲ್ಲೂಕು ಕಿರಸ್ತೆದಾರ್ ಹಾಲಿ ಬೆಂಗಳೂರು ತಾಲ್ಲೂಕಿನಲ್ಲಿ ನೇಮಕಾನ ಅಫಿಸರಾಗಿರುವ ಮೈ॥ಬೆಂ ಹಟೇಶಮೂರ್ತಿರಾಯರು ಕಳ್ಳರುಕೊಂಡಿರುತ್ತಾರೆ. ಸದರಿ ನೋಟು ಯಾರಲ್ಲಿ ಕೀರುತ್ತೆ ಮುತ್ತು ಅವರಲ್ಲಿ ಹ್ಯಾಗೆ ಬಂತೆಂಬುದಾಗಲಿ ತಿಳಿಸತಕ್ಕ ವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಸಹಾ ತಿಳಿಸುತ್ತಾರೆ. ನೋಟಿನ ಸಂಬಂಧವಾಗಿ ತಿಳಿಯಬರುವ ಸಂಗತಿ ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರವರಿಗೆ ತಿಳಿಸುವುದಕ್ಕೆ ತಕ್ಕದ್ದು.

ಎಲ್. ಕೃಷ್ಣರಾವ್,
ಸೂಪರಿಂಟೆಂಡೆಂಟ್, ಬೆಂಗಳೂರು ಡಿಸ್ಟ್ರಿಕ್ಟ್.

ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ನೋಟಿಫಿಕೇಷನ್, ನಂ. 322—C. S., ತಾರೀಖು 17-18ನೆ ಏಪ್ರಿಲ್ 1907.

ಈ ಕೆಳಗೆ ನಮೂದಿಸಿರುವ ಕೋ-ಆಪರೇಟಿವ್ ಸೊಸೈಟಿಯು 1905ನೆ ಇಸವಿಯ ಮೈಸೂರು ಕೋ-ಆಪರೇಟಿವ್ ಸೊಸೈಟಿಗಳ್ಯರಗ್ಯುಲೇಷನ್ 6ನೆ ಸೆಕ್ಷನ್ (2)ನೆ ಖಂಡ ಪ್ರಕರಣಕ್ಕನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿರುತ್ತೆ: —

ಹೆಸರು.	ಸ್ಥಳ.	ರಿಜಿಸ್ಟರು ಆದ ತಾರೀಖು.
ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್, ಲಿಮಿಟೆಡ್, ಬೆಂಗಳೂರು.	ಬೆಂಗಳೂರು ಸಿಟಿ ...	6ನೆ ಏಪ್ರಿಲ್ 1907.

ಎಂ. ಶಾಮರಾವ್,
ರಿಜಿಸ್ಟ್ರಾರ್, ಕೋ-ಆಪರೇಟಿವ್ ಸೊಸೈಟೀಸ್, ಇನ್ ಮೈಸೂರು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇಸ್ತೆಹಾರ್ ತಾರೀಖು 29ನೆ ಮಾರ್ಚ್ 1907.

ಸ॥1907ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1908ನೆ ಇಸವಿ ಜೂನ್ ಮಾಹೆ (ತಾರೀಖು 30ರ ವರಿಗೆ ಈ ಕೆಳಗಿನ ಎ ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವಾರುಗಳು, ವಗೈರೆಗಳ ಮೇಲೆ ಬಿ ಷೆಡ್ಯೂಲಿನಲ್ಲಿ ನಮೂದಾಗುವ ದರವರತೆ ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 78 ಮತ್ತು 79ನೆ ಸೆಕ್ಷನ್‌ಗಳಲ್ಲಿ ನಮೂದಿಸುವ ಷರತ್ತು ಗಳಿಗೆ ವಳಪಡಿಸಿ ಪ್ರತಿ ಬಂದು ಟೋಲ್ ಗೇಟನ್ನಲ್ಲಿಯಾಗಲೀ ಅಥವಾ ದರೋಬಸ್ತು ಗೇಟುಗಳಲ್ಲಿಯಾಗಲಿ ಟೋಲು ವಸೂಲ್ಮಾಡುವ ಬಾಬನ್ನು 1907ನೆ ಇಸವಿ ಮೇ ತಾರೀಖು 20ನೆ ಮಧ್ಯಾಹ್ನ 1 ಘಂಟೆ ಲಾಗಾಯಿತು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ಪ್ರಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ ಆಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ ಷೆಡ್ಯೂಲಿನಲ್ಲಿ ನಮೂದಾಗುವ ರೇಟನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲ್ಮಾಡಬೇಕು ಹೆಚ್ಚು ರೇಟನ್ನು ವಸೂಲ್ಮಾಡ ಕೂಡದು. ಇವಾಯಿ ಪ್ರಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಕಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಕೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ತೊಂದು ದರವನ್ನೇ ಆಗಲೀ ಮಂಜೂರು ಮಾಡುವ ಅಧಿಕಾರವು ಪ್ರಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಸಾವತಿ ಮಾಡಬೇಕು. ಹರಾಜು ಖೈದಾದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸವುವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಫೀಸರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಖೈದಾದಕೂಡಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟ್‌ದಾರನನ್ನು ಗುರಿಪಡಿಸಿ ಪುನಹ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆ ವಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಆದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫ ಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲು ಗೇಟುಗಳ ಮುಖಾಂತ್ರ ಪ್ರವೇಶವಾಹುವ ತರಹಾವಾರಿ ಗಾಡಿಯಾ ಜಾನವಾರುಗಳು ಇವುಗಳ ಮೇಲೆ ವಸೂಲಾವ ಟೋಲ್ ಯಾನೆ ಸುಂಕ ಇವುಗಳ ತಪ್ಪಿಸಲು ತೋರಿಸುವ ಲೆಕ್ಕವನ್ನು ಪೈಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಕ್ಕವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರಸಿಡೆಂಟರವರ ಇನ್‌ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು. ಇವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಕ್ಕಗಳನ್ನು ಅವರ ಇನ್‌ಸ್ಪೆಕ್ಷನ್ ಬಗ್ಗೆ ಹಾಜರ್ಮಾಡುವದಕ್ಕು ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಪ್ಸೀಲು ಲೆಕ್ಕವನ್ನು 6ನ ಕಲಂನಲ್ಲಿ ನಮೂದಿಸಿರುವಂತೆ, ಅಪತಕ್ಕ ಬಗ್ಗೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿ ಬಂದು ಟೋಲು ಗೇಟಿನಲ್ಲಿಯೂ, ಒಬ್ಬೊಬ್ಬ ಮುತ್ಸದ್ದಿಯನ್ನು ಇಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಬಳ್ಳೀ ಸ್ಥಿತಿಯಲ್ಲಿಟ್ಟುಕೊಂಡು ಅವು ಗಳನ್ನು ಉಪಯೋಗಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಪರತು ಗಳಿಗೆ ಪಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡಿಸಿಕ್ಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪ್ರೈಸಿಡೆಂಟರವರಿಂದ ವಿಧಾಯಕವಾವ ನಮೂನೆಯಲ್ಲಿ ಛಾಪಾಕಾಗದದಲ್ಲಿ ರೂಲ್ಸು ಪ್ರಕಾರ ಮುಚ್ಚಳಿಕೆ ಬರೆದುಕೊ ಡಬೇಕು.

10. ಈ ಕೆಳಗೆ ನಮೂದಾಗುವುಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು :—

1. ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವಾರುಗಳು ಮ ತ್ತು ಗವರ್ನಮೆಂಟು ಯಾ ಮ್ಯುನಿಸಿಪಲ್ ಕಾರ್ಯಾನಿಲಿಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಪೊಕರೊರ್ ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಬಂದು ದಿವಸ ದಲ್ಲಿ 24 ಗಂಟೆ ಕಾಲದೊಳಗಾಗಿ ಅಂದರೆ ಬಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯ ವರಿಗೂ ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ ಬಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

2. ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸ ತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ, ಮಿಲಿಟರಿ ಅಥವಾ ಗವರ್ಮೆಂಟ್ ಸ್ಟೋ ರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೊಲೀಸು ಆಫಿಸರರು, ನಾಕರ ಮೊನೇರು ಮತ್ತು ಅವರಿಗೆ ಸಂಬಂಧಪಟ್ಟ ಜನಗಳು ಮತ್ತು ಸಾಮಾನುಗಳು ಇರುವ ಅಪರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತೂ

ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳ ಮೇಲೆ ಸಹ :—

ಎ. ಷೆಡ್ಯೂಲ್.

ನಂಬರ್.	ರಸ್ತೆಗಳ ಹೆಸರು.	ಉಕ್ಕಡಗಳ ಹೆಸರು.
1	ರೈಲ್ವೆ ಸ್ಟೇಷ್ ರಸ್ತೆ ...	ಬಳಿಗೊಳದ ರಸ್ತೆ ಮತ್ತು ಸಿಕಲ್ಯೆ ರಸ್ತೆ ಇವೆರಡು ಜಂಕ್ಷೆ ಆಗು ವ ಸ್ಥಳದಲ್ಲಿರುವ ಉಕ್ಕಡ.
2	ಬಳಿಗೊಳದ ರಸ್ತೆ ...	ಕೆಂಪನಕಟ್ಟೆ ಉಕ್ಕಡ.
3	ಶ್ರೀರಂಗಪಟ್ಟಣದ ರಸ್ತೆ ...	ಎರಕಟ್ಟೆ ಡಿಟೋ
4	ಜಂಗಳೂರು ರಸ್ತೆ ...	ವೀರನಗೆರೆ ಡಿಟೋ
5	ಸಿವಿಟೆರಿ ರಸ್ತೆ ...	ಬಂಗಿ ಸರತ್ರಿ ಡಿಟೋ
6	ಮಹದೇವಪುರದ ರಸ್ತೆ ...	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ ...	ಇಟ್ಟಗೆ ಗೂಡು ಡಿಟೋ
8	ರೇಸ್‌ಕೋರ್ಸು ರಸ್ತೆ ...	ರೋಣಸಂತ್ರಿ ಡಿಟೋ
9	ನಂಜನಗೂಡು ರಸ್ತೆ ...	ನಂಜನಗೂಡು ಡಿಟೋ
10	ಡಿಟೋ ...	ಹಾಲಿ ಉಕ್ಕಡದ ಬಳಿ ವಿಧಾಯಕ ಮಾಡಿರುವಂತೆ ನಾಚನಹಳ್ಳಿ,
11	ಮಾನಂದವಾಡಿ ರಸ್ತೆ ...	ಚಟ್ಟನಕಳ್ಳಿ ಉಕ್ಕಡ.
12	ನೈಸರಾಯಿ ರಸ್ತೆ ...	ಹೊಲಗೇರಿ ಡಿಟೋ
13	ಜಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ ...	ಡಿಟೋ
14	ಜಾಬಿಲಿ ರಸ್ತೆ ...	ಕುಕ್ಕನಹಳ್ಳಿ ಉಕ್ಕಡ.
15	ಇಲವಾಲದ ರಸ್ತೆ ...	ಶ್ರೀರಾಂಪೇಟೆ ಡಿಟೋ

ಬಿ. ಷೆಡ್ಯೂಲ್.

ನಂಬರ್.	ತಪ್ಸೀಲು.	ದರ. ರೂ.	ಆ.	ಪೈ.
1	ಸ್ಪ್ರಿಂಗ್ ಇರತಕ್ಕ ಪ್ರತಿ ಬಂದು ನಾಲ್ಕು ಚಕ್ರದ ಕ್ಯಾರೇಜಿಗೆ ...	0	4	0
2	ಡಿಟೋ ಎರಡು ಚಕ್ರದ ಕ್ಯಾರೇಜಿಗೆ ...	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭ ರ್ತಿ ಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ.	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿ ಬಂದು ಗಾಡಿಗೆ ...	0	1	0
5	ಡಿಟೋ ಹೇರು ಹೇರಿಕ್ಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ...	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕ್ಕೊಂಡು ಬರತಕ್ಕ 13 ಹಿಡಿಗಳಿಗಿಂತ ಲೂ ಮಿಗಿಲಾದ ಕುದುರೆ 1ಕ್ಕೆ.	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕು ದುರೆ 1ಕ್ಕೆ.	0	0	6
9	ಡಿಟೋ ಆನೆ 1ಕ್ಕೆ	0	8	0
10	ಡಿಟೋ ಒಂಟೆ 1ಕ್ಕೆ	0	1	0

ಜಿ. ಹನುಮಂತರಾವ್, ಫಾರ್ ಪ್ರಸಿಡೆಂಟ್.